ಬಿ.ಪಿ.ಎಲ್. ಕಾರ್ಡುದಾರರಿಗೆ ಅನಿಲ ಸಂಪರ್ಕ

741 (196) ಶ್ರೀ ರಮೇಶ ಬಂಡಿಸಿದ್ದೇಗೌಡ ಎ. ಬಿ. (ಶ್ರೀರಂಗ ಪಟ್ಟಣ) : ಮಾನ್ಯ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಪ್ರಸ್ತುತ ಸಾಲಿನಲ್ಲಿ ಮಂಡ್ಯ ಜಿಲ್ಲೆಯಲ್ಲಿ ಆನ್‌ಲೈನ್ ಮೂಲಕ ಬಿ.ಪಿ.ಎಲ್. ಪಡಿತರ ಚೀಟಿ ಕೋರಿ ಸ್ವೀಕರಿಸಿದ ಒಟ್ಟು ಅರ್ಜಿಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ಅಂಕಿ-ಅಂಶಗಳನ್ನು ನೀಡುವುದು)

ಆ) ಅವುಗಳಲ್ಲಿ ಈವರೆಗೆ ಪಡಿತರ ಚೀಟಿಗಳನ್ನು ನೀಡಲಾಗಿರುವ ಅರ್ಜಿಗಳ ಸಂಖ್ಯೆ ಎಷ್ಟು; ಮಂಡ್ಯ ಜಿಲ್ಲೆಯಲ್ಲಿನ ತಾಲ್ಲೂಕುವಾರು ವಿವರ ನೀಡುವುದು;

ಇ) ಬಿ.ಪಿ.ಎಲ್ ಪಡಿತರ ಚೀಟಿಗಳನ್ನು ವಿತರಿಸಲಾಗಿರುವ ಗ್ರಾಹಕರಿಗೆ ಅನಿಲ ಸಂಪರ್ಕ ಸೌಲಭ್ಯವನ್ನು ಒದಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಈ) ಪ್ರಸ್ತುತ ಸಾಲಿನಲ್ಲಿ ಮಂಡ್ಯ ಜಿಲ್ಲೆಯಲ್ಲಿ ಬಿ.ಪಿ.ಎಲ್ ಪಡಿತರ ಚೀಟಿ ಗ್ರಾಹಕರಿಗೆ ಒದಗಿಸಲಾಗಿರುವ ಅನಿಲ ಸಂಪರ್ಕದ ಅಂಕಿ-ಅಂಶ ಗಳನ್ನು ನೀಡುವುದು;(ತಾಲ್ಲೂಕುವಾರು ಅಂಕಿ-ಅಂಶಗಳನ್ನು ಒದಗಿಸುವುದು)

ಉ) ಅಕ್ರಮ ಪಡಿತರ ಚೀಟಿ ಹೊಂದಿರುವ ಪ್ರಕರಣಗಳಿಗೆ ಸಂಬಂಧಿಸಿದಂತೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಮಂಡ್ಯ ಜಿಲ್ಲೆಗೆ ಸಂಬಂಧಿಸಿದಂತೆ ಗುರುತಿಸಲಾಗಿರುವ ಅಂತಹ ಪ್ರಕರಣಗಳೆಷ್ಟು? (ತಾಲ್ಲೂಕು ವಾರು ಅಂಕಿ- ಅಂಶಗಳನ್ನು ನೀಡುವುದು)

ಶ್ರೀ ಡಿ.ಎನ್. ಜೀವರಾಜ್ (ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು) :

ಅ) ದಿನಾಂಕ: 28.7.2012 ರವರೆಗೆ ಮಂಡ್ಯ ಜಿಲ್ಲೆಯಲ್ಲಿ, ಬಿಪಿಎಲ್ ಪಡಿತರ ಚೀಟಿ ಕೋರಿ 'ಆನ್‌ಲೈನ್' ಆಗಿ ಸಲ್ಲಿಸಿದ ಅರ್ಜಿಗಳ ಸಂಖ್ಯೆ ಮತ್ತು ನೀಡಲಾದ ಪಡಿತರ ಚೀಟಿಗಳ ತಾಲ್ಲೂಕುವಾರು ವಿವರ ಈ ಕೆಳಕಂಡಂತಿದೆ:

ತಾಲ್ಲೂಕು	ಬಿಪಿಎಲ್ ಪಡಿತರ ಚೀಟಿಗೆ ಸ್ವೀಕರಿಸಲಾದ ಅರ್ಜಿಗಳು	ಫೋಟೋ ಮತ್ತು ಬಯೋ ಮೆಟ್ರಿಕ್‌ಗೆ ಅನುಮೋದನೆ ಗೊಂಡ ಅರ್ಜಿಗಳು	ಫೋಟೋ ಮತ್ತು ಬಯೋಮೆಟ್ರಿಕ್ ನೀಡಲಾದ ಅರ್ಜಿಗಳು	ನೀಡಲಾದ ಬಿಪಿಎಲ್ ಪಡಿತರ ಚೀಟಿಗಳು
ಕೆ.ಆರ್. ಪೇಟೆ	9067	4531	58	2
ಮದ್ದೂರು	5466	2122	797	28
ಮಳವಳ್ಳಿ	9002	5078	704	33
ಮಂಡ್ಯ	11905	3047	447	7
ನಾಗಮಂಗಲ	3901	1021	45	5
ಪಾಂಡವಪುರ	5780	3005	10	26
ಶ್ರೀರಂಗ ಪಟ್ಟಣ	5344	704	46	4
ಒಟ್ಟು	**50,465**	**19,508**	**2,107**	**105**

ಇ). ಕೇಂದ್ರ ಸರ್ಕಾರದ ನಿಯಮದಂತೆ ಎಲ್ಲಾ ಕುಟುಂಬಗಳು LPG ಸಂಪರ್ಕ ಹೊಂದಲು ಅರ್ಹರಾಗಿರುತ್ತಾರೆ. ಬಿಪಿಎಲ್ ಪಡಿತರ ಚೀಟಿದಾರರಿಗೆ LPG ಸಂಪರ್ಕ ಒದಗಿಸುವ ಪ್ರತ್ಯೇಕ ನಿಯಮ ಜಾರಿಯಲ್ಲಿ ಇರುವುದಿಲ್ಲ. ಎಲ್‌ಪಿಜಿ ಸಂಪರ್ಕ ಸೌಲಭ್ಯವನ್ನು ಪಡೆಯಲು ಇಚ್ಚಿಸುವವರು ಅವರು ವಾಸಿಸುವ ಸ್ಥಳದ ವ್ಯಾಪ್ತಿಗೆ ಒಳಪಡುವ ಗ್ಯಾಸ್ ಏಜೆನ್ಸಿಗಳನ್ನು ಸಂಪರ್ಕಿಸಿ, ಕೇಂದ್ರ ಸರ್ಕಾರ ನಿರ್ದಿಷ್ಟಪಡಿಸದ ನಿಯಮಗಳ ಅಡಿಯಲ್ಲಿ LPG ಸಂಪರ್ಕ ಪಡೆಯಬಹುದಾಗಿದೆ.

ಈ) ದಿನಾಂಕ: 28.7.2012 ರವರೆಗೆ ಮಂಡ್ಯ ಜಿಲ್ಲೆಯಲ್ಲಿ, ಬಿಪಿಎಲ್ ಪಡಿತರ ಚೀಟಿದಾರರಿಗೆ ಒದಗಿಸಲಾದ ಎಲ್‌ಪಿಜಿ ಸಂಪರ್ಕಗಳ ತಾಲ್ಲೂಕುವಾರು ವಿವರ ಈ ಕೆಳಕಂಡಂತಿದೆ:

ತಾಲ್ಲೂಕು	ಎಲ್‌ಪಿಜಿ ಸಂಪರ್ಕ ಹೊಂದಿದ ಬಿಪಿಎಲ್ ಪಡಿತರ ಚೀಟಿಗಳ ಸಂಖ್ಯೆ
ಕೆ.ಆರ್. ಪೇಟೆ	1,578
ಮದ್ದೂರು	936

ಮಳವಳ್ಳಿ	33,96
ಮಂಡ್ಯ	4,437
ನಾಗಮಂಗಲ	1,438
ಪಾಂಡವಪುರ	1,554
ಶ್ರೀರಂಗಪಟ್ಟಣ	1,312
ಒಟ್ಟು	**14,651**

ಊ) ಪಡಿತರ ಚೀಟಿಗಳನ್ನು ಗ್ರಾಮೀಣ ಪ್ರದೇಶಗಳಲ್ಲಿ ಮನೆ ಆಸ್ತಿ ತೆರಿಗೆ ಸಂಖ್ಯೆಗೆ ಮತ್ತು ನಗರ/ಪಟ್ಟಣ ಪ್ರದೇಶಗಳಲ್ಲಿ ವಿದ್ಯುತ್ ಮೀಟರ್‌ನ ಆರ್.ಆರ್. ಸಂಖ್ಯೆಗೆ ಹೊಂದಾಣಿಕೆ ಮಾಡಿ ಮತ್ತು ವಾಸಿಸುವ ಮನೆಗೆ ವಿದ್ಯುತ್ ಮೀಟರ್ ಮತ್ತು ಆಸ್ತಿ ತೆರಿಗೆ ಸಂಖ್ಯೆ ಇರುವುದಿಲ್ಲ ಎನ್ನುವ ಸಂದರ್ಭದಲ್ಲಿ ಸ್ಥಳ ಪರಿಶೀಲನೆ ನಡೆಸಿ, ಅನರ್ಹ ಪಡಿತರ ಚೀಟಿಗಳನ್ನು ಗುರುತಿಸಿ ರದ್ದು ಪಡಿಸಲಾಗುತ್ತಿದೆ. ದಿನಾಂಕ: 28.7.2012ರವರೆಗೆ ಈ ಮೇಲಿನಂತೆ ಮಂಡ್ಯ ಜಿಲ್ಲೆಯಲ್ಲಿ ಗುರುತಿಸಿ ರದ್ದುಪಡಿಸಲಾದ ಅನರ್ಹ ಪಡಿತರ ಚೀಟಿಗಳ, ತಾಲ್ಲೂಕುವಾರು ವಿವರ, ಈ ಕೆಳಕಂಡಂತಿದೆ:

ತಾಲ್ಲೂಕು	ರದ್ದು ಪಡಿಸಲಾದ ಅನರ್ಹ ಪಡಿತರ ಚೀಟಿಗಳ ಸಂಖ್ಯೆ
ಕೆ.ಆರ್. ಪೇಟೆ	13,589,
ಮದ್ದೂರು	11,029
ಮಳವಳ್ಳಿ	17,059
ಮಂಡ್ಯ	26,609
ನಾಗಮಂಗಲ	7,440
ಪಾಂಡವಪುರ	10,145
ಶ್ರೀರಂಗಪಟ್ಟಣ	5,491
ಒಟ್ಟು	**91,362**